ಶ್ರೀ ವಾಟಾಳ್ ನಾಗರಾಜ್:- ಉತ್ತರ ಬಂದಿಲ್ಲ. ಈ ಬಗ್ಗೆ ಈ ಸದನದಲ್ಲಿ ನಾವು ಹಲವಾರು ಬಾರಿ ಹೇಳಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಬಿಎಸಿ ಯಲ್ಲಿ ಒಂದು ತೀರ್ಮಾನ ಆಗಬೇಕು. ಏಕೆಂದರೆ ಇವರು ಸರಕಾರದವರು ಉತ್ತರ ಕೊಟ್ಟಿಲ್ಲ ಎಂದು ಹೇಳುವುದು, ದೋಷಾರೋಪಣೆ ಮಾಡುವುದು ಬೇಡ. ನಾವು ಉತ್ತರವನ್ನು ಕೊಟ್ಟಿದ್ದೇವೆ. ಹೀಗೆ ಇಲ್ಲಿ ತಪ್ಪು, ಅಲ್ಲಿ ತಪ್ಪು, ಎಂದು ಹೇಳುವುದು ಬೇಡ, ಇದರಲ್ಲಿ ಸೆಕ್ರೇಟರಿಯೇಟ್‌ನ ತಪ್ಪೂ ಇಲ್ಲ. ನಾವು ಉತ್ತರವನ್ನು ಕೊಟ್ಟಿದ್ದೇವೆ. ಅದನ್ನು ಕಂಪೈಲ್ ಮಾಡಿಕೊಂಡು ಅವರು ಇವತ್ತೇ ತಮಗೆ ಒದಗಿಸುತ್ತಾರೆ. ಆದರೆ ಇಲ್ಲಿ ಒಂದು ತಪ್ಪು ಅಭಿಪ್ರಾಯವಾಗಿದೆ. ಹೀಗೆ ಸರಕಾರದವರು ಉತ್ತರವನ್ನು ಕೊಟ್ಟಿಲ್ಲ ಎಂಬ ಒಂದು ಅಭಿಪ್ರಾಯ ಬರಬಾರದು. ನಾನು ಇವೊತ್ತು ೪೬ ಪ್ರಶ್ನೆಗಳಲ್ಲಿ ೩೬ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದೇವೆ. ಕೊಡುವಂಥ ಉತ್ತರವನ್ನು ಈ ದಿವಸವೇ ಕೊಡಬೇಕೇ ಹಿಂದಿನ ದಿವಸ ಕೊಡಬೇಕೇ ಎಂಬ ವಿಚಾರ ತಮಗೆ ಬಿಟ್ಟಿದ್ದು. ಅದರ ಬಗ್ಗೆ ನಿರ್ಣಯ ಮಾಡುವುದು ತಮಗೆ ಬಿಟ್ಟಿದ್ದು. ನಾವು ಉತ್ತರವನ್ನು ಕೊಡುತ್ತೇವೆ. ಇದನ್ನು ಮೊದಲ ದಿವಸ ಹಂಚಬೇಕೆ? ಈ ದಿವಸ ಬೆಳಿಗ್ಗೆ ಹಂಚಬೇಕೇ ಎಂಬುದು ತಮಗೆ ಬಿಟ್ಟಿದ್ದು. ಆದರೆ ಹೀಗೆ ಸರ್ಕಾರಕ್ಕೆ ಒಂದು ಅಪವಾದ ಬೇಡ. ಈಗ ಇಷ್ಟು ಉತ್ತರವನ್ನು ಕೊಟ್ಟಿದ್ದೇವೆ. ಇನ್ನು ಮುಂದೆ ಉತ್ತರಗಳನ್ನು ಯಾವಾಗ ಕೊಡಬೇಕೆಂದು ತಾವು ನಿಗದಿ ಮಾಡಿ. ಒಂದು ವೇಳೆ ಆ ಕಾಲದಲ್ಲಿ ಉತ್ತರ ಕೊಡಲು ಆಗದಿದ್ದರೆ ನಾವು ಮೊದಲೇ ತಿಳಿಸುತ್ತೇವೆ. ಒಟ್ಟಿನಲ್ಲಿ ಈ ಬಗ್ಗೆ ಆತಂಕ ಬೇಡ. ಈಗ ಏನಾಗಿದೆ ಎಂದರೆ, ಬೆಳಿಗ್ಗೆ ಪ್ರಶ್ನೆ ಇರುತ್ತದೆ, ಉತ್ತರ ಇರುವುದಿಲ್ಲ. ಬಹುಶಃ ಮೊದಲನೇ ದಿವಸ ಎಷ್ಟು ಉತ್ತರ ಬರುತ್ತದೆ ಅದನ್ನು ಅಚ್ಚು ಹಾಕಿ ಬೆಳಿಗ್ಗೆ ಹಂಚಿಕೆಯಂಥ ಕೆಲಸವನ್ನು ಮಾಡಿದರೆ, ಬಹುಶಃ ಈ ಭಿನ್ನಾಭಿಪ್ರಾಯ ಇರುವುದಿಲ್ಲ. ಈ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವುಗಳು ನಿರ್ಧಾರ ಮಾಡಬೇಕು. ತಮ್ಮ ನಿರ್ಣಯಕ್ಕೆ ನಾವು ಬದ್ಧರಾಗಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೇ, ಸದನ ಕೆಲವು ಸದಸ್ಯರಿಗೆ ಮಾತ್ರ ಮೀಸಲಾಗಿದೆ ಎನ್ನುವ ಹಾಗೆ ಆಗಿದೆ. ಕೋಲಾರ, ಮಂಡ್ಯ, ಮಂಗಳೂರು, ಮೈಸೂರು, ಹಾಸನ ಹೀಗೆ ಹಳೆಯ ಮೈಸೂರು ಭಾಗದವರಿಗೆ ಮಾತ್ರ ಅವಕಾಶ ಸಿಗುತ್ತದೆ, ನಮಗೆ ಅವಕಾಶ ಸಿಗುತ್ತಾ ಇಲ್ಲ ಹೀಗೆ ಆಗಬಾರದು, ನಮಗೂ ಅವಕಾಶಸಿಗಬೇಕು.

<u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

I. <u>ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯ ಮಂತ್ರಿ)ಮಾನ್ಯ ಅಧ್ಯಕ್ಷರೆ.</u>

<u>೧೯೬೫ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮ ಕಲಂ ೭೧(೪)ರ ಮೇರೆಗೆ:</u>

೧) ೧೯೬೮ನೇ ಇಸವಿಯ ಕರ್ನಾಟಕ ಅಬಕಾರಿ (ಅಬಕಾರಿ ತೆರಿಗೆ ಹಾಗೂ ಹಕ್ಕು ಶುಲ್ಕ) ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ ೨೧-೧೧-೧೯೯೨ರಂದು ಹೊರಡಿಸಲಾದ ಎಫ್‌ಡಿ: ೧೭:ಪಿಇಎಸ್:೯೨ನೇ ಕ್ರಮಾಂಕದ ಅಧಿಸೂಚನೆ.

<u>೧೯೬೮ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಅಧಿನಿಯಮದ ೪(೩)ರ ಕಲಂ ಮೇರೆಗೆ:</u>

೨) ೧೯೯೨ನೇ ಇಸವಿಯ ಕರ್ನಾಟಕ ರಾಜ್ಯ ಮೀಸಲು ಆರಕ್ಷಕ (ನೇಮಕಾತಿ ಮತ್ತು ಸೇವಾ ಷರತ್ತುಗಳ) (ತಿದ್ದುಪಡಿ) ನಿಯಮಾವಳಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ

ದಿನಾಂಕ: ೨೨-೦೯-೧೯೯೨ರಂದು ಹೊರಡಿಸಲಾದ ಡಿಪಿಎಆರ್: ೫೧:ಎಸ್‌ಸಿಆರ್:೯೨ರ ಕ್ರಮಾಂಕದ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

II. <u>ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿ ಮತ್ತು ನೀರಾವರಿ ಮತ್ತು ಇಂಧನ ಮಂತ್ರಿ) ಅವರು:</u>

<u>೧೯೪೮ನೇ ಇಸವಿಯ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮದ ೬೯(೫)(ಎ)ನೇ ಕಲಮಿನ ಮೇರೆಗೆ:</u>

೧೯೯೧-೯೨ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಿಸುವುದು.

III. <u>ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿ) ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ ಅನುಚ್ಛೇದ ೨೧೩(೨)(ಎ)ರ ಮೇರೆಗೆ:</u>

೧) ೧೯೬೩ನೇ ಇಸವಿಯ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧ್ಯಾದೇಶದ ಸಂಬಂಧದಲ್ಲಿ ದಿನಾಂಕ: ೩೦-೦೧-೧೯೩೩ರಂದು ಹೊರಡಿಸಲಾದ ಎಲ್‌ಎಡಬ್ಲ್ಯು: ೧೪೮: ಎಲ್‌ಜಿಎನ್: ೯೨ರ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

<u>ಕರ್ನಾಟಕ ಭೂ ಕಂದಾಯ ನಿಯಮ ೧೯೬೪ರ ಪ್ರಕರಣ ೧೯ರ (೧ ಮತ್ತು ೨) ಕಲಮಿನ ಮೇರೆಗೆ:</u>

೨) ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ೧೨ ಮುಂಗಾರಿ ಗ್ರಾಮಗಳ ೧೯೪೯-೯೦ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೧೭,೬೧೪-೫೦ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ: ೦೪-೦೪-೧೯೯೨ರಂದು ಹೊರಡಿಸಲಾದ ಆರ್‌ಡಿ:೩೨: ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೩) ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ೩ ಮುಂಗಾರಿ ಗ್ರಾಮಗಳ ೧೯೪೩-೪೭ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೫,೦೬೦-೪೧ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ: ೨೭-೦೨-೧೯೯೨ರಂದು ಹೊರಡಿಸಲಾದ ಆರ್‌ಡಿ: ೧೩:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೪. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ೧೯೬೦-೬೧ನೇ ಸಾಲಿನ ೫ ಹಿಂಗಾರಿ ಗ್ರಾಮಗಳ ಭೂ ಕಂದಾಯ ರೂ. ೫೩,೯೭೪-೨೬ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ:೧೨-೧೨-೧೯೯೨ರಂದು ಹೊರಡಿಸಲಾದ ಆರ್‌ಡಿ:೧೪೨:ಟಿಆರ್‌ಎಂ:೯೧ರ ಕ್ರಮಾಂಕದ ಅಧಿಸೂಚನೆ.

೫. ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ ೭೩ ಮುಂಗಾರಿ ಗ್ರಾಮಗಳ ೧೯೪೭-೪೮ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೧,೦೭,೩೬೭-೯೪ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ: ೦೯-೦೪-೧೯೯೨ರಂದು ಹೊರಡಿಸಲಾದ ಆರ್‌ಡಿ:೨೮ ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೬. ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ ೧೦ ಮುಂಗಾರಿ ಗ್ರಾಮಗಳ ೧೯೪೯-೯೦ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ.೧೦,೧೯೪-೨೫ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ:೧೪-೦೭-೧೯೯೨ರಂದು ಹೊರಡಿಸಲಾದ ಆರ್‌ಡಿ:೭೬:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೭. ಬೆಳಗಾವಿ ಜಿಲ್ಲೆಯ ರಾಯಭಾಗ್ ತಾಲ್ಲೂಕಿನ ೬ ಮುಂಗಾರಿ ಗ್ರಾಮಗಳ ೧೯೪೮-೪೯ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೧೦,೫೫೪-೪೪ನ್ನು ಮನ್ನಾ ಮಾಡುವ

ಸಂಬಂಧದಲ್ಲಿ ದಿನಾಂಕ: ೨೨-೦೪-೧೯೯೨ರಂದು ಹೊರಡಿಸಲಾದ ಆರ್ಡಿ:೨೦:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೮. ವಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ೪೫ ಹಿಂಗಾರಿ ಗ್ರಾಮಗಳ ೧೯೭೫-೭೬ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ.೧,೦೯,೬೬೮-೦೦ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ ೦೯-೦೪-೧೯೯೨ರಂದು ಹೊರಡಿಸಲಾದ ಆರ್ಡಿ:೨೩:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೯. ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ೬ ಮುಂಗಾರಿ ಗ್ರಾಮಗಳ ೧೯೪೯-೯೦ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೧೨,೦೬೨-೨೦ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ:೧೪-೦೭-೧೯೯೨ರಂದು ಹೊರಡಿಸಲಾದ ಆರ್ಡಿ:೪೦:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೧೦. ಧಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ ೩೯ ಮುಂಗಾರಿ ಗ್ರಾಮಗಳ ೧೯೪೭-೪೮ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೫೩,೭೫೭-೩೩ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ:೦೬-೦೭-೧೯೯೨ರಂದು ಹೊರಡಿಸಲಾದ ಆರ್ಡಿ:೨೦೦:ಟಿಆರ್‌ಎಂ:೯೧ರ ಕ್ರಮಾಂಕದ ಅಧಿಸೂಚನೆ.

೧೧. ಧಾರವಾಡ ಜಿಲ್ಲೆ ಮುಂಡರಗಿ ತಾಲ್ಲೂಕಿ ೧೯೯೦-೯೧ನೇ ಸಾಲಿನ ೧೭ ಹಿಂಗಾರಿ ಗ್ರಾಮಗಳ ಭೂ ಕಂದಾಯ ರೂ.೫೨,೧೧೭-೯೩ನ್ನು ಮನಾ ್ನ ಮಾಡುವ ಸಂಬಂಧದಲ್ಲಿ ದಿನಾಂಕ:೦೬-೧೨-೧೯೯೨ರಂದು ಹೊರಡಿಸಲಾದ ಆರ್ಡಿ:೨೦೩:ಟಿಆರ್‌ಎಂ:೯೧ರ ಕ್ರಮಾಂಕದ ಅಧಿಸೂಚನೆ.

೧೨. ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ೧೭ ಹಿಂಗಾರಿ ಗ್ರಾಮಗಳ ೧೯೪೪-೪೫ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೫೪,೯೬೬-೪೭ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ:೦೬-೦೭-೧೯೯೨ರಂದು ಹೊರಡಿಸಲಾದ ಆರ್ಡಿ:೭೨:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೧೩. ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ೧೯ ಹಿಂಗಾರಿ ಗ್ರಾಮಗಳ ೧೯೪೪-೪೫ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೬೦,೯೦೨-೪೯ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ: ೧೩-೦೨-೧೯೯೨ರಂದು ಹೊರಡಿಸಲಾದ ಆರ್ಡಿ:೨೨೪:ಟಿಆರ್‌ಎಂ:೯೧ರ ಕ್ರಮಾಂಕದ ಅಧಿಸೂಚನೆ.

೧೪. ಬೆಳಗಾವಿ ಜಿಲ್ಲೆಯ ರಾಯಭಾಗ್ ತಾಲ್ಲೂಕಿನ ೧೨ ಮುಂಗಾರಿ ಗ್ರಾಮಗಳ ೧೯೪೭-೪೮ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೧೬,೩೭೪-೨೫ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ: ೦೨-೦೪-೧೯೯೨ರಂದು ಹೊರಡಿಸಲಾದ ಆರ್ಡಿ:೧೯:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೧೫. ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ೨೮ ಮುಂಗಾರಿ ಗ್ರಾಮಗಳ ೧೯೪೮-೪೯ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೨೧,೭೧೧-೪೯ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ:೧೪-೦೬-೧೯೯೨ರಂದು ಹೊರಡಿಸಲಾದ ಆರ್ಡಿ:೪೩:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆ.

೧೬. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ೮ ಮುಂಗಾರಿ ಗ್ರಾಮಗಳ ೧೯೪೬-೪೭ನೇ ಸಾಲಿನ ಸ್ಥಗಿತಗೊಳಿಸಿದ ಭೂ ಕಂದಾಯ ರೂ. ೩೬,೩೭೯-೫೨ನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ: ೧೪-೦೭-೧೯೯೨ರಂದು ಹೊರಡಿಸಲಾದ ಆರ್ಡಿ:೬೯:ಟಿಆರ್‌ಎಂ:೯೨ರ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

IV. ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಮಂತ್ರಿ) ಮಾನ್ಯ ಅಧ್ಯಕ್ಷರೆ
೧೯೬೩ನೇ ಇಸವಿಯ ಕೃಷಿ ವಿಶ್ವವಿದ್ಯಾನಿಲಯಗಳ ಅಧಿನಿಯಮ ೩೮(೩)ನೇ ಕಲಮಿನ ಮೇರೆಗೆ:

೧೯೪೮-೪೯ನೇ ಸಾಲಿನ ಜಿ ಗಳೂರು ಕೃಷಿ ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೋಧನಾ ವರದಿ ಮತ್ತು ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

V. ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೊಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ) ಮಾನ್ಯ ಅಧ್ಯಕ್ಷರೆ,
ಭಾರತ ಸಂವಿಧಾನದ ಅನುಚ್ಛೇದ ೨೧೩(೨)(ಎ)ನೇ ಕಲಮಿನ ಮೇರೆಗೆ:

೧. ೧೯೬೩ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತ್‌ಗಳು ಹಾಗೂ ನ್ಯಾಯ ಪಂಚಾಯತ್‌ಗಳು (ತಿದ್ದುಪಡಿ) ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ: ೨೫-೧೧-೧೯೬೩ರಂದು ಹೊರಡಿಸಲಾದ ಎಲ್‌ಎಡಬ್ಲ್ಯು:೬:ಎಲ್‌ಜಿಎನ್:೯೩ರ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

೧೯೬೩ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್, ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತ್‌ಗಳ ಅಧಿನಿಯಮ ೩೦೯(೩)ನೇ ಕಲಮಿನ ಮೇರೆಗೆ:

೨. ೧೯೯೧-೯೨ನೇ ಸಾಲಿನ ಶಿವಮೊಗ್ಗ, ರಾಯಚೂರು ಮತ್ತು ಬಿಜಾಪುರ ಜಿಲ್ಲಾ ಪರಿಷತ್ತಿನ ವಾರ್ಷಿಕ ಅಡಳಿತ ವರದಿಗಳನ್ನು (ಹಾಗೂ ಕಾರ್ಯಸಾಧನೆಗಳನ್ನು ಕರ್ನಾಟಕ ಸರ್ಕಾರವು ಪರೀಶಿಲಿಸಿದ ಬಗೆಗಿನ ಜ್ಞಾಪನಾ ಪತ್ರದೊಂದಿಗೆ) ಮಂಡಿಸುತ್ತೇನೆ.

VI) ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಸಹಕಾರ ಮಂತ್ರಿ) ಮಾನ್ಯ ಅಧ್ಯಕ್ಷರೆ,
೧೯೫೯ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ೧೩೦ನೇ ಕಲಮಿನ ಮೇರೆಗೆ:

೧೯೫೯ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ೨೭ನೇ ಕಲಮಿನ ಉಪ ಬಂಧಗಳಿಂದ ಧಾರವಾಡದಲ್ಲಿರುವ ಧಾರವಾಡ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತವನ್ನು ೧೯೯೩ನೇ ಮಾರ್ಚ್‌ವರೆಗೆ ವಿನಾಯಿತಿಗೊಳಿಸುವ ಬಗ್ಗೆ ದಿನಾಂಕ: ೦೯-೧೧-೧೯೯೨ರಂದು ಹೊರಡಿಸಲಾದ ಸಿಎಂಡಬ್ಲ್ಯು:೩೮೭:ಸಿಎಲ್‌ಎಂ:೯೨ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

VII) ಶ್ರೀ ಬೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿ) ಮಾನ್ಯ ಅಧ್ಯಕ್ಷರೆ,
೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ ೧೬ನೇ ಕಲಮಿನ ೧ನೇ ಉಪ ಕಲಮಿನ ಮೇರೆಗೆ:

೧. ೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ ಮೇರೆಗೆ ಬೆಂಗಳೂರಿನಲ್ಲಿರುವ ವಿಶ್ವೇಶ್ವರಯ್ಯ ಕೈಗಾರಿಕೆ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯವು ಹೊಂದಿದ ಕೆ.ಎ-೦೧-೨೬೨೩ ಮತ್ತು ಕೆ.ಎ-೦೧-೨೭೦೭ನೇ ಸಂಖ್ಯೆಗಳ ವಾಹನಗಳಿಗೆ ಸಂಬಂಧಿಸಿದಂತೆ ಪಾವತಿ ಮಾಡುವ ತೆರಿಗೆಯನ್ನು ವಿನಾಯಿತಿ ಗೊಳಿಸುವ ಬಗ್ಗೆ ದಿನಾಂಕ:೨೪-೧೧-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೧೫೧:ಟಿಎಂಟಿ:೯೧ನೇ ಕ್ರಮಾಂಕದ ಅಧಿಸೂಚನೆ.

೨. ೧೯೫೭ನೇ ಇಸವಿಯ ಕರ್ನಾಟಕ ಮೋಟಾರ್ ವಾಹನಗಳ ಅಧಿನಿಯಮದ ಮೇರೆಗೆ: ತುಮಕೂರಿನಲ್ಲಿರುವ ಶ್ರೀ ಸಿದ್ಧಗಂಗಮಠ ಅವರು ಹೊಂದಿದ ಕೆ.ಎ-೦೬:೨೦೪ ಮತ್ತು ಕೆ.ಎ-೦೬:೧೦೫ನೇ ಸಂಖ್ಯೆಗಳ ಮೋಟಾರ್ ವಾಹನಗಳಿಗೆ ಸಂಬಂಧಿಸಿದಂತೆ ಪಾವತಿ

ಮಾಡುವ ತೆರಿಗೆಯನ್ನು ವಿನಾಯಿತಿಗೊಳಿಸುವ ಬಗ್ಗೆ ದಿನಾಂಕ:೧೮-೦೨-೧೯೯೧ರಂದು ಹೊರಡಿಸಲಾದ ಎಫ್‌ಟಿಡಿ:೧೮:ಟಿಎಂಟಿ:೯೧ನೇ ಕ್ರಮಾಂಕದ ಅಧಿಸೂಚನೆ.

೩. ೧೯೫೭ನೇ ಇಸವಿಯ ಕರ್ನಾಟಕ ಮೋಟಾರ್ ವಾಹನಗಳ ಅಧಿನಿಯಮದ ಅನುಸೂಚಿಯ 'ಎ' ಭಾಗದ ಐಟಂ ೮(೫)(೨)ರ ಮೇರೆಗೆ ಬೆಂಗಳೂರು ಕದಿರೇನಹಳ್ಳಿಯಲ್ಲಿರುವ ಜಮಿಯ ರಿಯಾಜುಸ್ ಸಲೇಹತ್ ಅವರು ಹೊಂದಿದ ಎಫ್ ೩೦೭ನೇ ಸಂಖ್ಯೆಯ ವಾಹನಕ್ಕೆ ಸಂಬಂಧಿಸಿದಂತೆ ಪ್ರತಿ ಕ್ವಾರ್ಟರ್ ಪ್ರತಿ ಚದುರಮೀಟರ್ ೮೦-೦೦ ರೂ.ಗಳಂತೆ ಮೋಟಾರ್ ವಾಹನ ತೆರಿಗೆಯನ್ನು ರಿಯಾಯಿತಿ ದರದಲ್ಲಿ ವಸೂಲಿ ಮಾಡುವ ಬಗ್ಗೆ ದಿನಾಂಕ: ೨೩-೧೧-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೨೧೨:ಟಿಎಂಟಿ:೯೧ನೇ ಕ್ರಮಾಂಕದ ಅಧಿಸೂಚನೆ.

೪. ೧೯೫೭ನೇ ಇಸವಿಯ ಕರ್ನಾಟಕ ಮೋಟಾರ್ ವಾಹನಗಳ ಅಧಿನಿಯಮದ ಅನುಸೂಚಿಯ 'ಎ' ಭಾಗದ ಐಟಂ ೯(ಡಿ) (ii)ರ ಮೇರೆಗೆ ಬೆಂಗಳೂರಿನ ಜಯನಗರದಲ್ಲಿರುವ ವಿಡ್ ದಿ ವೀಕರ್ ಟ್ರಸ್ಟ್ ಹೊಂದಿದ ಸಿ.ಎ.ಎಕ್ಸ್.೫೯೫೨ನೇ ಸಂಖ್ಯೆಯ ವಾಹನಕ್ಕೆ ಸಂಬಂಧಿಸಿದಂತೆ ಪ್ರತಿ ಕ್ವಾರ್ಟರ್ ಪ್ರತಿ ಚದುರಮೀಟರ್‌ಗೆ ೮೦-೦೦ ರೂಪಾಯಿಗಳಂತೆ ತೆರಿಗೆಯನ್ನು ರಿಯಾಯಿತಿ ದರದಲ್ಲಿ ವಸೂಲಿ ಮಾಡುವ ಬಗ್ಗೆ ದಿನಾಂಕ: ೩೦-೧೧-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೫೨:ಟಿಎಂಟಿ:೯೦ನೇ ಕ್ರಮಾಂಕದ ಅಧಿಸೂಚನೆ.

೫. ಬೆಂಗಳೂರಿನ ರೊಸೇರಿಯನ್ನರ ಸಂಸ್ಥೆ ಹೊಂದಿರತಕ್ಕ ವಾಹನ ಸಂಖ್ಯೆ: ಸಿ.ಕೆ.ಜಿ:೫೪೭ಕ್ಕೆ ಕರ್ನಾಟಕ ಮೋಟಾರ್ ವಾಹನ ತೆರಿಗೆ ವಿಧೇಯಕ ೧೯೫೭ರ ಅಧಿನಿಯಮ ಭಾಗ 'ಎ' ಯ (೮) (೫) (ii)ರ ಪ್ರಕಾರ ಮೂರು ತಿಂಗಳಿಗೊಮ್ಮೆ ಒಂದು ಚದುರ ಮೀಟರ್‌ಗೆ ರೂ. ೮೦-೦೦ನ್ನು ರಿಯಾಯಿತಿ ದರದಲ್ಲಿ ಮೋಟಾರ್ ವಾಹನ ತೆರಿಗೆಯನ್ನು ವಿಧಿಸುವ ಸಂಬಂಧದಲ್ಲಿ ದಿನಾಂಕ:೨೩-೧೧-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೧೩೧:ಟಿಎಂಟಿ:೯೧ರ ಕ್ರಮಾಂಕದ ಅಧಿಸೂಚನೆ.

೬. ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಅವಧೂತದತ್ತ ಪೀಠ ಟ್ರಸ್ಟ್(ರಿ) ಸಂಸ್ಥೆಯವರು ಹೊಂದಿರುವ ವಾಹನ ಸಂಖ್ಯೆ: ಎಪಿ ೩೭-೩೭೭೧ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ೧೯೫೭ರಡಿಯಲ್ಲಿ ಪಾವತಿ ಮಾಡಬೇಕಾದ ತೆರಿಗೆಯನ್ನು ವಿನಾಯಿತಿ ನೀಡುವ ಬಗ್ಗೆ ದಿನಾಂಕ:೦೫-೧೧-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೧೯೨ ಟಿಎಂಟಿ:೯೧ರ ಕ್ರಮಾಂಕದ ಅಧಿಸೂಚನೆ.

೭. ಬೆಂಗಳೂರು ಹೆಣ್ಣೂರು ರಸ್ತೆ, ಸೆಂಟ್ ಥಾಮಸ್ ಟೌನ್ ಅಂಚೆಯ ಅಂಗವಿಕಲರ ತರಬೇತಿ ಕೇಂದ್ರ ಸಂಸ್ಥೆಯವರು ಹೊಂದಿರತಕ್ಕ ಮೋಟಾರ್ ವಾಹನ ಸಂಖ್ಯೆ: ಕೆ.ಎ-೦೩-೧೯೨೧ಕ್ಕೆ ಸಂಬಂಧಿಸಿದಂತೆ ೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ತೆರಿಗೆ ವಿನಾಯಿತಿ ಮತ್ತು ಈ ಹಿಂದೆ ಅನುಪಯುಕ್ತ ವಾಹನ ಸಂಖ್ಯೆ. ಎಂ.ಪ್ಯೆ.ಡಿ.೯೭೮೧ಕ್ಕೆ ನೀಡಿದ ವಿನಾಯಿತಿಯನ್ನು ಹಿಂದಕ್ಕೆ ಪಡೆಯುವ ಸಂಬಂಧದಲ್ಲಿ ದಿನಾಂಕ: ೩೧-೧೦-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೧೨೧:ಟಿಎಂಟಿ:೯೨ರ ಕ್ರಮಾಂಕದ ಅಧಿಸೂಚನೆ.

೮. ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಮುಡುವನಹಳ್ಳಿಯ ಜಯದೇವ ಸಾಮಾಜಿಕ ಹಾಗೂ ಕುಷ್ಠ ರೋಗ ಪುನರ್ವಸತಿ ಕೇಂದ್ರದವರು ಹೊಂದಿರತಕ್ಕ ಕೆ.ಎ.೧೦-ಎಂ-೬೪ ಮತ್ತು ಕೆ.ಎ-೦೯-ಎಂ.೧೨೫೯ ಸಂಖ್ಯೆಯ ಈ ಎರಡು ವಾಹನಗಳಿಗೆ ಸದರಿ ಕಾಯ್ದೆಯಡಿಯಲ್ಲಿ ಸಂಬಂಧಿಸಿದಂತೆ ಪಾವತಿ ಮಾಡಬೇಕಾದ ತೆರಿಗೆಯನ್ನು ಕೂಡಲೇ ಜಾರಿಗೆ ಬರುವಂತೆ ವಿನಾಯಿತಿ ಮಾಡುವ ಸಂಬಂಧದಲ್ಲಿ ದಿನಾಂಕ: ೧೫-೦೯-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೯೧:ಟಿಎಂಟಿ:೯೨ರ ಕ್ರಮಾಂಕದ ಅಧಿಸೂಚನೆ.

೯. ಸೇಲಂನ ಅಣ್ಣಾ ಸಾರಿಗೆ ಸಂಸ್ಥೆಯವರು ಹೊಂದಿರತಕ್ಕಂಥ ಮೂವತ್ತು ವಾಹನಗಳಿಗೆ ಸಂಬಂಧಿಸಿದಂತೆ ಪಾವತಿ ಮಾಡಬೇಕಾಗಿರುವ ವಾಹನ ತೆರಿಗೆಯನ್ನು ವಿನಾಯಿತಿ

ಮಾಡುವ ಸಂಬಂಧದಲ್ಲಿ ದಿನಾಂಕ: ೨೬-೦೨-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೪೦: ಟಿಎಂಟಿ:೯೨ರ ಕ್ರಮಾಂಕದ ಅಧಿಸೂಚನೆ.

೧೦. ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಹೊಂದಿರತಕ್ಕ ೫ ವಾಹನಗಳಿಗೆ ಸಂಬಂಧಿಸಿದಂತೆ ತೆರಿಗೆ ವಿನಾಯಿತಿ ಮಾಡುವ ಸಂಬಂಧದಲ್ಲಿ ದಿನಾಂಕ:೧೦-೦೪-೧೯೯೨ರಂದು ಹೊರಡಿಸಲಾದ ಎಫ್‌ಟಿಡಿ:೧೩೩:ಟಿಎಂಟಿ:೯೨ರ ಕ್ರಮಾಂಕದ ಅಧಿಸೂಚನೆ.

೧೧. ಬೆಂಗಳೂರಿನ ಚಿನ್ಮಯ ನರ್ಸಿಂಗ್ ಸಂಸ್ಥೆಯವರು ಹೊಂದಿರುವ ವಾಹನ ಸಂಖ್ಯೆ. ಸಿಎಕೆ ೬೧೩೩ಕ್ಕೆ ಸಂಬಂಧಿಸಿದಂತೆ ೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮದ ಮೇರೆಗೆ ಪಾವತಿ ಮಾಡಬೇಕಾಗಿರುವ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ:೩೦-೦೩-೧೯೯೧ ರಂದು ಹೊರಡಿಸಲಾದ ಎಫ್‌ಟಿಡಿ:೫೮:ಟಿಎಂಟಿ:೯೧ರ ಕ್ರಮಾಂಕದ ಅಧಿಸೂಚನೆ.

೧೨. ಬೆಂಗಳೂರು, ಭಾಷೆ ಮತ್ತು ಶ್ರವಣ ಸಂಸ್ಥೆಯು ಹೊಂದಿರುವ ಕೆವಿ-೦೩-೬೨೪೯ರ ಕ್ರಮಾಂಕ ವಾಹನಕ್ಕೆ ಸಂಬಂಧಿಸಿದಂತೆ ೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ ಮೇರೆಗೆ ಪಾವತಿ ಮಾಡಬೇಕಾಗಿರುವ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ: ೦೨-೦೪-೧೯೯೧ರಂದು ಹೊರಡಿಸಲಾದ ಎಫ್‌ಟಿಡಿ:೩೨೬:ಟಿಎಂಟಿ:೯೧ರ ಕ್ರಮಾಂಕದ ಅಧಿಸೂಚನೆ.

೧೩. ಮಂಗಳೂರು, ಸೇಂಟ್ ಅಂತೋನಿ ಧಾರ್ಮಿಕ ಸಂಸ್ಥೆಯವರು ಹೊಂದಿರುವ ಸಿಟಿಎ ೮೯೧೪ನೇ ಸಂಖ್ಯೆಯ ವಾಹನಕ್ಕೆ ಸಂಬಂಧಿಸಿದಂತೆ ೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಮದ ಮೇರೆಗೆ ಪಾವತಿ ಮಾಡಬೇಕಾಗಿರುವ ತೆರಿಗೆಯ ವಿನಾಯಿತಿ ಸಂಬಂಧದಲ್ಲಿ ದಿನಾಂಕ: ೩೦-೦೩-೧೯೯೧ ರಂದು ಹೊರಡಿಸಲಾದ ಎಫ್‌ಟಿಡಿ:೨೭೬:ಟಿಎಂಟಿ:೯೦ರ ಕ್ರಮಾಂಕದ ಅಧಿಸೂಚನೆ.

೧೪. ಆಂಧ್ರ ಪ್ರದೇಶದ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಮೋಟಾರು ವಾಹನಗಳ ಸಂಬಂಧದಲ್ಲಿ ೧೯೫೭ನೇ ಇಸವಿಯ ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮದ ಮೇರೆಗೆ ಪಾವತಿ ಮಾಡಬೇಕಾಗಿರುವ ತೆರಿಗೆ ವಿನಾಯಿತಿ ಸಂಬಂಧದಲ್ಲಿ ದಿನಾಂಕ:೨೫-೦೩-೧೯೯೧ರ ಕ್ರಮಾಂಕದ ಅಧಿಸೂಚನೆ.

೧೫. ಬೆಂಗಳೂರು, ಜಾಲಹಳ್ಳಿ ಏರ್‌ಪೋರ್ಟ್ಸ್ ಸ್ಟೇಷನ್ ಹೊಂದಿರುವ ಕೆವಿ-೦೪-೪೫೮೮ನೇ ಕ್ರಮಾಂಕದ ವಾಹನದ ಸಂಬಂಧದಲ್ಲಿ ೧೯೫೭ನೇ ಇಸವಿಯ ಕರ್ನಾಟಕದ ಮೋಟಾರು ವಾಹನ ತೆರಿಗೆ ಅಧಿನಿಯಮದ ಮೇರೆಗೆ ಪಾವತಿ ಮಾಡಬೇಕಾಗಿರುವ ತೆರಿಗೆ ವಿನಾಯಿತಿಯ ಸಂಬಂಧದಲ್ಲಿ ದಿನಾಂಕ: ೨೩-೦೨-೧೯೯೧ ರಂದು ಹೊರಡಿಸಲಾದ ಎಫ್‌ಟಿಡಿ:೨೬:ಟಿಎಂಟಿ:೯೦ರ ಕ್ರಮಾಂಕದ ಅಧಿಸೂಚನೆ.

೧೬. ಭಾರತ ಪ್ರವಾಸೋದ್ಯಮ ನಿಗಮ ಅಥವಾ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಥವಾ ಪಾಂಡಿಚೇರಿಯ ಕೇಂದ್ರಾಡಳಿತ ಪ್ರವಾಸೋದ್ಯಮ ನಿಗಮ ಅಥವಾ ಕರ್ನಾಟಕ ರಾಜ್ಯ ಹೊರತುಪಡಿಸಿ ಯಾವುದೇ ರಾಜ್ಯದ ಅಥವಾ ಪಾಂಡಿಚೇರಿ ಕೇಂದ್ರಾಡಳಿತದಲ್ಲಿ ನೊಂದಾಯಿಸಲ್ಪಟ್ಟ ಬಾಡಿಗೆ ಕಾರುಗಳು ಅಥವಾ ಕರ್ನಾಟಕ ರಾಜ್ಯ ಹೊರತುಪಡಿಸಿ ಯಾವುದೇ ರಾಜ್ಯದಲ್ಲಿನ ಮೋಟಾರು ವಾಹನಗಳ ಸಂಬಂಧದಲ್ಲಿ ೧೯೫೭ನೇ ಇಸವಿ ಕರ್ನಾಟಕ ಮೋಟಾರು ವಾಹನಗಳ (ತೆರಿಗೆ) ಅಧಿನಿಯಮದ ಮೇರೆಗೆ ಪಾವತಿ ಮಾಡಬೇಕಾಗಿರುವ ಪರಸ್ಪರ ಕ್ರಮದ ಆಧಾರದ ಮೇಲೆ ತೆರಿಗೆ ವಿನಾಯಿತಿಯ ಸಂಬಂಧದಲ್ಲಿ ದಿನಾಂಕ:೧೫-೧೨-೧೯೯೦ ರಂದು ಹೊರಡಿಸಲಾದ ಎಫ್‌ಟಿಡಿ:೩೨೬:ಟಿಎಂಟಿ:೯೦ರ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VIII. ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) ಮಾನ್ಯ ಅಧ್ಯಕ್ಷರೆ,

೧. ೧೯೬೨ನೇ ಇಸವಿಯ ಕರ್ನಾಟಕ ಗೃಹ ಮಂಡಳಿಯ ಅಧಿನಿಯಮ ೬೯ನೇ ಕಲಮಿನ ಮೇರೆಗೆ:

೧. ೧೯೪೯-೯೦ನೇ ಸಾಲಿನ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಲೆಕ್ಕಪರಿಶೋಧನಾ ವರದಿ.

೧೯೬೪ನೇ ಇಸವಿಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ ೨೫(೫)(ಅ) ಕಲಮಿನ ಮೇರೆಗೆ:

೨. ೧೯೮೭-೮೮ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಲೆಕ್ಕಪತ್ರಗಳ ಮೇಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

೧೯೬೯ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ೪೮(೫)ನೇ ಕಲಮಿನ ಮೇರೆಗೆ:

೩. ೧೯೯೦-೯೧ನೇ ಸಾಲಿನ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕತಪಾಸಣಾ ವರದಿ ಮತ್ತು ೧೯೯೧-೯೨ನೇ ಸಾಲಿನ ಹಾಸನ, ಕೆ.ಜಿ.ಎಫ್, ಕಾರವಾರ ಮತ್ತು ಬಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರಗಳ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

IX) ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿ) ಮಾನ್ಯ ಅಧ್ಯಕ್ಷರೆ,

೧೯೫೬ನೇ ಇಸವಿಯ ಕಂಪನಿಗಳ ಅಧಿನಿಯಮ ೬೧೯(ಎ) ಕಲಮಿನ ಮೇರೆಗೆ:

೧. ೧೯೯೦-೯೧ನೇ ಸಾಲಿನ ಮೆಸರ್ಸ್ ಮೈಸೂರು ಕಾಸ್ಮೆಟಿಕ್ಸ್ ನಿಯಮಿತದ ವಾರ್ಷಿಕ ವರದಿ.

೨. ೧೯೪೯-೯೦ನೇ ಸಾಲಿನ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತದ ೫೦ನೇ ವಾರ್ಷಿಕ ವರದಿ.

೩. ೧೯೯೧-೯೨ನೇ ಸಾಲಿನ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ ೧೬ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು.

೪. ೧೯೯೧-೯೨ನೇ ಸಾಲಿನ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತದ ೩೧ನೇ ವಾರ್ಷಿಕ ವರದಿ.

೫. ೧೯೯೦-೯೧ನೇ ಸಾಲಿನ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ೧೫ನೇ ವಾರ್ಷಿಕ ವರದಿ.

೬. ೧೯೯೧-೯೨ನೇ ಸಾಲಿನ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ೨೬ನೇ ವಾರ್ಷಿಕ ವರದಿ.

೭. ೧೯೯೧-೯೨ನೇ ಸಾಲಿನ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ ೫೭ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

X) ಶ್ರೀ ಪೆರಿಕಲ್ ಎಂ. ಮಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ದೂರುಗಳ ರಾಜ್ಯ ಮಂತ್ರಿ): ಮಾನ್ಯ ಅಧ್ಯಕ್ಷರೆ,

೧೯೫೬ನೇ ಇಸವಿಯ ಕಂಪನಿಗಳ ಅಧಿನಿಯಮ ೬೧೯(ಎ) ಕಲಮಿನ ಮೇರೆಗೆ:

೧೯೮೫-೮೬ನೇ ಸಾಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ೧೬ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

XI) ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿ):
ಮಾನ್ಯ ಅಧ್ಯಕ್ಷರೆ,

೧೯೫೬ನೇ ಇಸವಿಯ ಕಂಪನಿಗಳ ಅಧಿನಿಯಮ ೬೧೯(ಎ) ಕಲಮಿನ ಮೇರೆಗೆ:

೩೧-೦೩-೧೯೯೯ಕ್ಕೆ ಅಂತ್ಯಗೊಳ್ಳುವ ಕಾರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಯಮಿತದ ೧೯ನೆ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ರಾಜ್ಯ ಮಂತ್ರಿಯವರ ಪರವಾಗಿ ೧೯೬೪ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ ೨೨ನೇ ಕಲಮಿನ ಮೇರೆಗೆ:

೧. ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಕಾರ್ಮಿಕರು ತಮ್ಮ ಬಯಲು ಸಭಾಂಗಣದಲ್ಲಿ ೬೫ ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ: ೦೮-೦೧-೧೯೯೭ರಂದು ಹೊರಡಿಸಲಾದ ಹೆಚ್‌ಡಿ:೨೦೯:ಸಿಎನ್‌ಎ:೯೨ರ ಕ್ರಮಾಂಕದ ಆದೇಶ.

೨. ಮಂಡ್ಯ, ಮೈಸೂರು, ಹಾಸನ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಮೊಂಬಾಯಿಯಲ್ಲಿರುವ ಭಾರತ ಮಕ್ಕಳ ಚಲನಚಿತ್ರಗಳ ಸಂಘದವರು ಸರಬರಾಜು ಮಾಡಿದ ಮಕ್ಕಳ ಚಲನಚಿತ್ರಗಳನ್ನು ಪ್ರದರ್ಶಿಸಲು ಮದರಾಸಿನ ಯುನಿಸೋ ಎಂಟರ್‌ಪ್ರೈಸಸ್‌ನವರಿಗೆ ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ:೧೩-೦೧-೧೯೯೩ರಂದು ಹೊರಡಿಸಲಾದ ಹೆಚ್‌ಡಿ:೨೩೫:ಸಿಎನ್‌ಸಿ:೯೨ರ ಕ್ರಮಾಂಕದ ಆದೇಶವನ್ನು ಮಂಡಿಸುತ್ತೇನೆ.

XIII) ಶ್ರೀ ರಾಮಲಿಂಗರೆಡ್ಡಿ (ಹಣಕಾಸು ರಾಜ್ಯ ಮಂತ್ರಿ):- ಮಾನ್ಯ ಅಧ್ಯಕ್ಷರೆ,
೧೯೫೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಕಲಂ ೬೯ರ ಮೇರೆಗೆ:

ಅವಲಕ್ಕಿ (ಬೀಟನ್ ರೈಸ್) ಮಾರಾಟದ ಮೇಲೆ ೧೯೫೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ಪಾವತಿ ಮಾಡಬೇಕಾಗಿರುವ ತೆರಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ:೨೪-೧೧-೯೨ರಂದು ಹೊರಡಿಸಲಾದ ಎಫ್‌ಡಿ:೧೬೯:ಸಿಎಸ್‌ಎಲ್:೯೨ರ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು:- ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಬಸವರಾಜ ರಾಯರೆಡ್ಡಿ:- ಅಧ್ಯಕ್ಷರೇ, ಎಲ್ಲಾ ಸದಸ್ಯರಿಗೂ ಸಮಾನದವಾದ ಅವಕಾಶ ಇರಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೇ, ಎಲ್ಲಾ ಸದಸ್ಯರಿಗೂ ಸಮಾನಾವಕಾಶ ಸಿಗುವಂತೆ ಇನ್ನು ಮುಂದಾದರೂ ತಾವು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಆಯಿತು ಸರಿಪಡಿಸೋಣ.

(ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ)